# مقدمة وغلاف المنتقى من موسوعة الأحاديث النبوية

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ.

ಮುನ್ನುಡಿ

ಸರ್ವ ಲೋಕಗಳ ಪರಿಪಾಲಕನಾಗಿರುವ ಅಲ್ಲಾಹನಿಗೆ ಸ್ತುತಿ, ನಮ್ಮ ಪ್ರವಾದಿ ಮುಹಮ್ಮದ್ ರವರ ಮೇಲೆ, ಅವರ ಕುಟುಂಬದವರ ಮೇಲೆ ಮತ್ತು ಅವರ ಎಲ್ಲಾ ಸಹಚರರ ಮೇಲೆ ಮತ್ತು ಪ್ರತಿಫಲ ದಿನದ ತನಕ ಅವರನ್ನು ಅತ್ಯುತ್ತಮವಾಗಿ ಅನುಸರಿಸುವವರ ಮೇಲೆ ಅಲ್ಲಾಹು ಕೃಪೆ ಮತ್ತು ಶಾಂತಿ ವರ್ಷಿಸಲಿ ಮುಂದೆವರೆದು ಹೇಳುವುದೇನೆಂದರೆ:

ಒಬ್ಬ ಮುಸ್ಲಿಮನು ಓದುವಿಕೆ, ಯೋಚನೆ, ಚಿಂತನೆ, ಜ್ಞಾನ ಮತ್ತು ಕಾರ್ಯವನ್ನು ಪರಿಗಣಿಸಿ ಗಮನವಹಿಸಬೇಕಾದ ಅತ್ಯಂತ ದೊಡ್ಡ ವಿಷಯ ಅಲ್ಲಾಹನ ಗ್ರಂಥದ ನಂತರ ಅಲ್ಲಾಹನ ಪ್ರವಾದಿ ಮುಹಮ್ಮದ್ ﷺ ರವರ ಸುನ್ನತ್ ಆಗಿದೆ. ಪ್ರವಾದಿ ﷺ ರವರು ಹೇಳಿದರು

«تركتُ فيكم أيُّها الناس، ما إنِ اعتصمتم به، فلن تضلُّوا أبدًا: كتاب الله، وسُنَّة نبيِّه»

ಜನರೇ ನಾನು ನಿಮ್ಮ ಮಧ್ಯೆ ಎರಡು ವಸ್ತುಗಳನ್ನು ಬಿಟ್ಟಿದ್ದೇನೆ ಅವುಗಳನ್ನು ಬಿಗಿಯಾಗಿ ಹಿಡಿದುಕೊಳ್ಳುವವರಿಗೆ ನೀವು ಎಂದಿಗೂ ಪಥಭ್ರಷ್ಟರಾಗಲಾರಿರಿ : ಅಲ್ಲಾಹನ ಗ್ರಂಥ ಮತ್ತು ಅವನ ಪ್ರವಾದಿಯ ಸುನ್ನತ್. ಈ ಹದೀಸನ್ನು

ಇಮಾಮ್ ರವರು ವರದಿ ಮಾಡಿದ್ದಾರೆ ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

{وَمَا آتَاكُمُ الرَّسُولُ فَخُذُوهُ وَمَا نَهَاكُمْ عَنْهُ فَانْتَهُوا}

ಸಂದೇಶವಾಹಕರು ನಿಮಗೆ ಏನನ್ನು ನೀಡುವರೋ ಅದನ್ನು ಸ್ವೀಕರಿಸಿರಿ ಮತ್ತು ಅವರು ನಿಮ್ಮನ್ನು ಯಾವುದರಿಂದ ವಿರೋಧಿಸುವರೋ ಅದರಿಂದ ದೂರ ಸರಿಯಿರಿ. [ಅಲ್-ಹಶ್ರ್:7]. ಆದುದರಿಂದ

ಇಸ್ಲಾಮೀ ಸಾಹಿತ್ಯ ಪ್ರಸರಣ ಸೇವಾ ಇಲಾಖೆ ಮತ್ತು ದಾವಾ ಮತ್ತು ಮಾರ್ಗದರ್ಶನ ಇಲಾಖೆ ರಬ್ವಾ ಪ್ರವಾದಿಯವರ ಹದೀಸ್‌ಗಳ ವಿಶ್ವಕೋಶವನ್ನು ತಯಾರಿಸಲು ಮತ್ತು ಅವುಗಳನ್ನು ಹಲವಾರು ಭಾಷೆಗಳಿಗೆ ಭಾಷಾಂತರಿಸಲು ಇಚ್ಛಿಸಿದೆ.

ಒಬ್ಬ ಮುಸ್ಲಿಮನಿಗೆ ತನ್ನ ಧರ್ಮ ಮತ್ತು ಪ್ರಪಂಚದ ವಿಷಯಗಳಲ್ಲಿ ಅಗತ್ಯವಿರುವ ಈ ವಿಶ್ವಕೋಶದ ಗುಂಪನ್ನು ಆಯ್ಕೆ ಮಾಡಲು ಅದರ ಸಂಕ್ಷಿಪ್ತ ವಿವರಣೆ, ಅದರ ಅರ್ಥ ಮತ್ತು ಆಧಾರಗಳ ಮತ್ತು ಅದರ ಕೆಲವು ಪ್ರಯೋಜನಗಳ ವಿವರಣೆಯೊಂದಿಗೆ ಮತ್ತು "ಪ್ರವಾದಿರವರ ಹದೀಸ್ ಗಳ ವಿಶ್ವಕೋಶದಿಂದ ಆಯ್ಕೆ"ಎಂಬ ಹೆಸರಿನ ಈ ಪುಸ್ತಕದಲ್ಲಿ ಅದನ್ನು ಹೊರತರಲು ಸರ್ವಶಕ್ತನಾದ ಅಲ್ಲಾಹನು ಅನುಕೂಲ ಮಾಡಿಕೊಟ್ಟಿದ್ದಾನೆ: ಪ್ರವಾದಿ ರವರ ಹದೀಸ್ ಗಳ ವಿಶ್ವಕೋಶದಿಂದ ಆಯ್ಕೆ ಅದರ ವಿಷಯವು ಪ್ರಯೋಜನಕಾರಿಯಾಗಲು ಮತ್ತು ಅಲ್ಲಾಹನ ಪ್ರವಾದಿರವರ ಸುನ್ನತ್ತನ್ನು

ಮಾನವಕುಲಕ್ಕೆ ಅವರ ಭಾಷೆಯಲ್ಲಿ ತಲುಪಿಸಲು ಈ ವಿಶ್ವಕೋಶವನ್ನು ಜಗತ್ತಿನ ಎಲ್ಲಾ ಜೀವಂತ ಭಾಷೆಗಳಿಗೆ ಅನುವಾದಿಸಲಾಗುತ್ತಿದೆ

ಅಲ್ಲಾಹು ಈ ಕಾರ್ಯವನ್ನು ಸ್ವೀಕರಿಸಲಿ, ಅದನ್ನು ಸಮೃದ್ಧ ಪೂರ್ಣಗೊಳಿಸಲಿ ಮತ್ತು ಉದಾತ್ತನಾದ ಅಲ್ಲಾಹನ ಸಂಪ್ರೀತಿಗಾಗಿ ಅದನ್ನು ನಿಷ್ಕಳಂಕಗೊಳಿಸಲಿ ಮತ್ತು ಅದನ್ನು ತಯಾರಿಸಲು, ಭಾಷಾಂತರಿಸಲು ಮತ್ತು ಪ್ರಕಟಿಸಲು ಸಹಾಯ ಮಾಡಿದ ಎಲ್ಲರಿಗೂ ಅತ್ಯುತ್ತಮ ಪ್ರತಿಫಲ ನೀಡಲಿ.

ನಮ್ಮ ಪ್ರವಾದಿ ಮುಹಮ್ಮದ್ ರವರ ಮೇಲೆ ಅಲ್ಲಾಹು ಶಾಂತಿ ಮತ್ತು ಕರುಣೆ ವರ್ಷಿಸಲಿ

ಸಂಕ್ಷಿಪ್ತ ಸಾರ

ಪ್ರವಾದಿರವರ ಹದೀಸ್‌ಗಳು ಷರಿಯತ್ ನ ಮೂಲಗಳಲ್ಲಿ ಎರಡನೇ ಮೂಲವಾಗಿದೆ. ಸರ್ವಶಕ್ತನಾದ ಅಲ್ಲಾಹನ ಹೇಳುತ್ತಾನೆ

{وَمَا يَنْطِقُ عَنِ الْهَوَى (٣) إِنْ هُوَ إِلَّا وَحْيٌ يُوحَى}

"ಅವರು ಅವರ ಇಷ್ಟದಂತೆ ಮಾತನಾಡುವುದಿಲ್ಲ.

ಅವರು ಮಾತನಾಡುವುದು ಅವರಿಗೆ ನೀಡಿದ ದೇವವಾಣಿಯ ಆಧಾರದಲ್ಲಿ ಮಾತ್ರವಾಗಿದೆ." [ಅನ್ನಜ್ಮ್: 3-4]

ಹದೀಸ್ ಗಳ ವಿಶ್ವಕೋಶದಿಂದ ಎಂಬ ಈ ಆಯ್ಕೆಯು ಪ್ರವಾದಿ ರವರ ಸಮಗ್ರ ಹದೀಸ್ ಗಳ ಸಂಗ್ರಹವನ್ನು ಒಳಗೊಂಡಿದೆ ಒಬ್ಬ ಮುಸ್ಲಿಮನಿಗೆ ತನ್ನ ಧರ್ಮ ಮತ್ತು ಪ್ರಾಪಂಚಿಕ ವಿಷಯಗಳಲ್ಲಿ ಅದರ ಅಗತ್ಯವಿದೆ ಅದರ ಸಂಕ್ಷಿಪ್ತ ವಿವರಣೆ, ಅದರ

ಅರ್ಥ ಮತ್ತು ಆಧಾರಗಳ ಮತ್ತು ಅದರ ಕೆಲವು ಪ್ರಯೋಜನಗಳ ವಿವರಣೆಯೊಂದಿಗೆ ಅದರ ವಿಷಯವು ಪ್ರಯೋಜನಕಾರಿಯಾಗಲು ಮತ್ತು ಅಲ್ಲಾಹನ ಪ್ರವಾದಿರವರ ಸುನ್ನತ್ತನ್ನು ಮಾನವಕುಲಕ್ಕೆ ಅವರ ಭಾಷೆಯಲ್ಲಿ ತಲುಪಿಸಲು ಈ ವಿಶ್ವಕೋಶವನ್ನು ಜಗತ್ತಿನ ಎಲ್ಲಾ ಜೀವಂತ ಭಾಷೆಗಳಿಗೆ ಅನುವಾದಿಸಲಾಗಿದೆ.

# ಪರಿವಿಡಿ

No table of contents entries found

kn375v1.0 - 04/09/2026